# ಕಂಗೊಳಿಸುವ ಕೆಂಪು ಮುಂದೆ ಕಂಗೆಡಿಸುವ ಮಂಜು ಹಿಂದೆ



**ರಾಜೇಂದ್ರ ಚೆನ್ನಿ**

ಕಲೆ: ಸಂತೋಷ್ ಸಸಿಹಿತ್ಲು

ಬೇಂದ್ರೆಯವರ 'ಸಖೀಗೀತ'ವು ಅನೇಕ ಕಾರಣಗಳಿಗಾಗಿ ಒಂದು ಅಚ್ಚರಿಯೆ. 'ಸಖೀಗೀತ' ಬರೆದಾಗ ಬೇಂದ್ರೆಯವರಿಗೆ 41 ವರ್ಷ. ಅದು ಪ್ರಕಟವಾಗಿದ್ದು 1937ರಲ್ಲಿ. ಮುಂದಿನ ವರ್ಷಗಳಲ್ಲಿ ಅದನ್ನು 'ದಾಂಪತ್ಯ ಗೀತೆ', ದಾಂಪತ್ಯದ ವಿಜೃಂಭಣೆಯೆನ್ನುವ ಸಿದ್ಧ ಮಾದರಿಗಳ ಎರಕದಲ್ಲಿಟ್ಟು ಓದಲಾಯಿತು. ಈ ಎರಕಕ್ಕೆ ಹೊಂದಲಾರದ ಅಂಶಗಳನ್ನು ಗಮನಿಸಿದ ವಿಮರ್ಶಕರೂ ಕೂಡ ಅವುಗಳ ಹೊರತಾಗಿಯೂ ಕೃತಿಯು ಸಂಬಂಧಗಳ ಸಾಫಲ್ಯದ ಬಗ್ಗೆಯೂ ಇದೆ ಎಂದು ಬರೆದರು. ವಿಶೇಷವೆಂದರೆ, ಇಂಥ ಓದುಗಳಿಗೆ ತಕ್ಕುದಾದ ಅಂದರೆ ಯಾವ ಬಿರುಕು, ತಡೆಗಳಿಲ್ಲದೆ ದಾಂಪತ್ಯವನ್ನು ಇತ್ಯಾತ್ಮಕವಾಗಿ ವೈಭವಿಸುವ ಕೆ.ಎಸ್. ನರಸಿಂಹಸ್ವಾಮಿ ಅವರ 'ಮೈಸೂರ ಮಲ್ಲಿಗೆ' ಕವನ ಸಂಕಲನ ಪ್ರಕಟವಾದದ್ದು 1942ರಲ್ಲಿ. ಅಲ್ಲದೆ ನವೋದಯ ಕಾವ್ಯದ ಭಾವನಾತ್ಮಕತೆ, ಆದರ್ಶಪರತೆಯ ಬಗ್ಗೆ ವಿವರಣೆ ನೀಡುವಾಗ ಕೂಡ 'ಸಖೀಗೀತ'ದ ಪ್ರಮುಖ ಭಾಗದಲ್ಲಿ ಬರುವ ಅನೇಕ ಅಂಶಗಳನ್ನು ಕಡೆಗಣಿಸಲಾಯಿತು. ಇತ್ತೀಚೆಗೆ ಬೇಂದ್ರೆಯವರ ಕಾವ್ಯವನ್ನು ಮತ್ತೆ ಓದುತ್ತಿದ್ದಾಗ ನನಗೆ ಅನ್ನಿಸಿದ್ದೆಂದರೆ, ಬೇಂದ್ರೆ ಕಾವ್ಯದ ಪ್ರಮುಖ ಲಕ್ಷಣವು ಅವಿಶ್ರಾತ್ಮಕ, ತನ್ಮಯತೆ ಅಥವಾ ಏಕಮುಖಿಯಾದ ಅನುಭವದ ಲೋಲುಪತೆ ಅಲ್ಲ. ಬದಲಾಗಿ ಅನುಭವದ ಬಗ್ಗೆ ನಿಷ್ಠುರವಾದ ಕೆಲವೊಮ್ಮೆ ಬೆಚ್ಚಿ ಬೀಳಿಸುವಂಥ ಪ್ರಾಮಾಣಿಕತೆಯಾಗಿದೆ. ಹೀಗಾಗಿಯೇ ಯಾವುದೇ ಅನುಭವದ ವಿಷಮತೆ, ಅಸಮಗ್ರತೆ ಹಾಗೂ ವಿರೋಧಾಭಾಸಗಳ ಬಗ್ಗೆ ತೀವ್ರವಾದ ಎಚ್ಚರವಿರುವ ಕಾವ್ಯ ಇದಾಗಿದೆ. ಅದರಲ್ಲೂ 'ವೈಯಕ್ತಿಕ', 'ಕೌಟುಂಬಿಕ' ಎಂದು ಕರೆಯಬಹುದಾದ ವಸ್ತುವಿನ ಬಗೆಗಿನ ಪದ್ಯಗಳಲ್ಲಿ ಈ ಅಂಶವೂ ಪ್ರಬಲವಾಗಿದೆ. ಹೀಗೆ ಹೇಳುವಾಗ ಬೇಂದ್ರೆ ನವ್ಯ ಅಥವಾ ನವ್ಯೋತ್ತರ ಮಾರ್ಗದ ಕವಿಯಾಗಿದ್ದು ಅವರು ನವೋದಯ ಸಂದರ್ಭದಲ್ಲಿ ಬರೆದದ್ದು 'An accident of history' ಎಂದು ನಾನು ಹೇಳಹೊರಟಿಲ್ಲ. ಈ ಅಂಶಗಳನ್ನು ನಮ್ಮ ಓದಿನಲ್ಲಿ ಗಮನಿಸಿದರೆ ಅವರ ಪದ್ಯಗಳು ಕೊಡುವ ಅರ್ಥಗಳು ಭಿನ್ನವಾಗಿರುತ್ತವೆ ಎಂದು ಹೇಳುವ ಸೀಮಿತ ಉದ್ದೇಶವು ಮಾತ್ರ ನನ್ನದಾಗಿದೆ.

'ಸಖೀಗೀತ'ದ ನಾಂದಿಸ್ವರೂಪದ ಭಾಗವಾಗಿ ಬರೆದುದು ಎಂದು ಒಂದು ಟಿಪ್ಪಣಿ ವಿವರಿಸುವ 'ಬರುವುದೇನೆ ನೆಪ್ಪಿಗೆ' ಎನ್ನುವ ಪದ್ಯವನ್ನು ನೋಡಬಹುದು. ಚಿಕ್ಕದಾದ ಎರಡು ಸಾಲುಗಳು, ಸಾಲಿನಲ್ಲಿ ಎರಡೇ ಪದಗಳು ಮತ್ತು ಗಟ್ಟಿಯಾದ ಅಂತ್ಯಪ್ರಾಸವುಳ್ಳ ರಚನೆಯು ಈ ಪದ್ಯದ ಪಲ್ಲವಿಯಂತಿದೆ. ಆದರೆ, 'ಬರುವುದೇನೆ ನೆಪ್ಪಿಗೆ' ಎನ್ನುವ ಮೊದಲ ಸಾಲು ಪುನರಾವರ್ತನೆಯಾಗುತ್ತ